ವಿಭಿನ್ನ ಸಂಸ್ಕೃತಿಗಳ ಸ್ವಾತಂತ್ರ್ಯ ಮತ್ತು ಪರಸ್ಪರ ನಿರ್ಭರತೆಯ ಬಗ್ಗೆ ಟಿಪ್ಪಣಿ ಮಾಡಿದ 'ನಮ್ಮ ಸಂಸ್ಕೃತಿಗಳು ಸ್ವತಂತ್ರವಾಗಿದ್ದಾಗ್ಯೂ, ಅವು ಪರಸ್ಪರ ಅವಲಂಬಿತವಾಗಿವೆ. ವಿವಿಧ ಸಂಸ್ಕೃತಿಗಳ ಸಮನ್ವಯ ಅಂದರೆ ಸ್ಕಾಟಿಷ್ ಮತ್ತು ಇಂಡಿಯನ್ ಹುರ್ರಾಹುರ್ರಾಹುರ್ರಾ!'

ಅತಿಥಿಗಳು ಸಹ ಘೋಷಿಸಿದರುಹುರ್ರಾಹುರ್ರಾ ಹುರ್ರಾ!

ನಾನು ಸುತ್ತಮುತ್ತ ನೋಡಿದೆ. ನನ್ನ ಹೃದಯ ಸಂತಸದಿಂದ ಕುಣಿಯುತ್ತಿತ್ತು. ನಾನು ಡೆನ್ಮಾರ್ಕ್‌ನ ಒಂದು ವಿಸ್ತೃತ ಸುಂದರ ಸ್ಥಳದಲ್ಲಿ, ಇದೀಗ ತಾನೇ ನನ್ನ ಧರ್ಮಪತ್ನಿಯಾದ ನೀನಾಳೊಂದಿಗಿದ್ದೆ. ನನಗೆ ಅತೀವ ಸಂತಸವಾಗಿತ್ತು; ಮುಂದಿನ ಭವಿಷ್ಯ ಹೇಗಾದರೂ ಇರಲಿ, ಆ ಬಗ್ಗೆ ನನಗೆ ಯೋಚನೆಯಿಲ್ಲ.

'ರೋಸಕಿಲ್ಡೆ ಕೌಂಟಿ' ಎಂಬ ಬರಹವನ್ನು ಬೋರ್ಡಿನಲ್ಲಿ ಓದಿದೆ. ಇಪ್ಪತ್ತಾರು ಕಿ.ಮೀ. ಮಾರ್ಗ ನಿರ್ಧಾರವಾಯಿತು. ನಾನು ತಾಸ್ರುಪ್ ಸಹ ದಾಟಿದೆ. ನಡೆಯುತ್ತಾ ಹದಿನಾಲ್ಕು ಗಂಟೆಗಳು ಕಳೆದಿವೆ. ಸಂಜೆಯ ಏಳು ಗಂಟೆಯಾಗಿದೆ. ಇನ್ನೂ ಐವತ್ತಾರು ಕಿ.ಮೀ. ನಡೆಯುವುದಿದೆ. ಓಹ್... ರಸ್ತೆಯಲ್ಲಿ ಹಗಲು ಕಳೆದಂತೆ, ನಡು ವಯಸ್ಸಿನವರು ಮತ್ತು ವೃದ್ಧರು ಕಾಣ ಬರುವುದು ಕಡಿಮೆಯಾಗುತ್ತಿದೆ. ಈಗ ಸುತ್ತಮುತ್ತ ಯುವಕರ ಗುಂಪು ಕಾಣಬರುತ್ತಿದೆ. ಶನಿವಾರ. ವಾರದ ಕೊನೆಯ ಸಂಜೆ ಯುವಕರದ್ದಾಗಿರುತ್ತದೆ. ರೋಸ ಕಿಲ್ಡೆ ಕೌಂಟಿಯಲ್ಲಿ ತುಂಬಾ ಕೋಲಾಹಲವಿದೆ. ಒಂದು ಕಡೆಯಿಂದ ಸಂಗೀತ ಕೇಳಿ ಬರುತ್ತಿದೆ. ಯಾರೋ ರೆಸ್ಟೋರೆಂಟಿನಲ್ಲಿ ತಿನ್ನುತ್ತಾ ಕುಡಿಯುತ್ತಿದ್ದಾರೆ. ಕೆಲವರು ಪ್ರಯಾಣ ಮಾಡುತ್ತಿದ್ದಾರೆ. ಜೀವಂತ ವಾತಾವರಣ... ನಾನೂ ಒಂದು ರೆಸ್ಟೋರೆಂಟಿನೊಳಗೆ ನುಗ್ಗಿದೆ. ಮಧ್ಯಾಹ್ನ ತಿಂದ ಸ್ಯಾಂಡ್‌ವಿಚ್, ಎಂದೋ ಕರಗಿದೆ. ಎರಡನೆಯ ಸ್ಯಾಂಡ್‌ವಿಚ್ ಆ ವೃದ್ಧನಿಗೆ ಕೊಟ್ಟಿದ್ದೆ. ನನಗೆ ತುಂಬಾ ಹಸಿವೆಯಾಗಿದೆ. ಕಾಲುಗಳು ಸಹ ಅಪಾರ ದಣಿದಿವೆ; ಇವುಗಳಿಗೆ ವಿಶ್ರಾಂತಿ ಬೇಕು.

ನಾನು ಕಾರ್ನರ್ ಜಾಗವನ್ನು ಆಯ್ಕೆ ಮಾಡಿದೆ; ಅಲ್ಲಿ ಸೋಫಾಗಳನ್ನು ಹಾಕಲಾಗಿತ್ತು. ಕೆಳಗೆ ಕೂತಾಗ ವಾಸ್ತವವಾಗಿಯೂ ಕಾಲುಗಳಿಗೆ ವಿಶ್ರಾಂತಿ ಲಭಿಸಿತು. ನಾನು ಕಾಲುಗಳನ್ನು ಮೇಲೆತ್ತಿಕೊಂಡೆ. ಚಕ್ಕಳಬಕ್ಕಳ ಹಾಕಿ ನೆಮ್ಮದಿಯಿಂದ ಕೂತೆ. ಹಣ್ಣು ಮತ್ತು ಚಹಾಕ್ಕೆ ಆರ್ಡರ್ ಮಾಡಿದೆ. ಮುಂದಿನ ಮಾರ್ಗಕ್ಕಾಗಿ ಒಂದು ಸ್ಯಾಂಡ್‌ವಿಚ್ ಪ್ಯಾಕ್ ಮಾಡಿಸಿಕೊಂಡೆ. ಏಕೆಂದರೆ ರೋಸಿಕಿಲ್ಡೆಯ ನಂತರ ಯಾವುದೇ ರೆಸ್ಟೋರೆಂಟ್ ಸಿಗುವುದು ಕಷ್ಟ, ನಗರ ಇಲ್ಲಿಗೇ ಕೊನೆಯಾಗುತ್ತದೆ ಎಂಬುದು ನನಗೆ ತಿಳಿದಿದೆ.

ನನ್ನೆದುರು ಲೂಸಿಗ್ರೇಸಿಯಂಥ ಯುವಕರು ಯುವತಿಯರ ಗುಂಪೊಂದು ಜಮಾಯಿಸಿದೆ. ಅವರು ಕೇಕೆ ಹಾಕುತ್ತಾ, ನಗುತ್ತಾ ಗದ್ದಲ ಹಬ್ಬಿಸುತ್ತಿದ್ದಾರೆ. ಇಂದಿನ ಯುವಕರು ಹಿಂದಿನ ಕಾಲದ ಯುವಕರಿಗಿಂತ ಭಿನ್ನರಾಗಿದ್ದಾರೆ; ಅವರು ವ್ಯಾವಹಾರಿಕತೆಯ ಭಾವನೆಯನ್ನು ಹೊಂದಿರುತ್ತಾರೆ, ವಿಷಯವನ್ನು ಸ್ಪಷ್ಟಪಡಿಸುತ್ತಾರೆ, ಅವರಲ್ಲಿ ಕೃತ್ರಿಮತೆಯಿರುವುದಿಲ್ಲ, ಅವರಿಗೆ ಯಾರ ದಾಕ್ಷಿಣ್ಯ ಮತ್ತು ಬಾಧ್ಯತೆ ಇರುವುದಿಲ್ಲ. ಕಾಲ ಮಗ್ಗುಲಾಗುತ್ತಿರುತ್ತದೆ. ನಮ್ಮ ಪೂರ್ವಿಕರಿಗೆ ನಿಜವೆನಿಸಿದ್ದು, ನಮಗೆ ನಿಜವಾಗಲಾರದು; ನಮಗೆ ನಿಜವಾದದ್ದು, ನಮ್ಮ ಮಕ್ಕಳಿಗೆ ಅನ್ವಯಿಸುವುದಿಲ್ಲ. ನನ್ನ ಪೀಳಿಗೆಯ ತಂದೆತಾಯಿಗೆ, ನಮ್ಮ ಮಗ ವಿವಾಹಕ್ಕೆ ಮೊದಲು ಹುಡುಗಿಯೊಬ್ಬಳನ್ನು ಗರ್ಭಿಣಿ ಮಾಡದಿದ್ದರೆ ಸಾಕೆಂಬ ಭಯವಿರುತ್ತಿತ್ತು. ಇಂದಿನ ಕಾಲದ ತಂದೆತಾಯಿಗೆ, ತಮ್ಮ ಮಗ ಒಬ್ಬ ಹುಡುಗಿಯನ್ನು ಮಾತ್ರ ಪ್ರೀತಿಸಲಿ, ಹುಡುಗನನ್ನು ಪ್ರೀತಿಸದಿರಲಿ ಎಂಬ ಭಯವಿರುತ್ತದೆ. 'ನನ್ನ ಮಗ ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿರುವವರೆಗೆ ನನಗ್ಯಾವ ಚಿಂತೆಯಿಲ್ಲ' ಎಂದು ನನ್ನ ಸಹೋದ್ಯೋಗಿ ಎಂದ್ರಿಯಾಜ್ ಹೇಳುತ್ತಾನೆ.

ಸಾಮಾನ್ಯವಾಗಿ ನನ್ನ ಪುತ್ರಿಯರು ಮತ್ತು ನೀನಾಳ ಪುತ್ರಿಯರೊಂದಿಗೆ ಹೊಂದಾಣಿಕೆಯಾಗುತ್ತದೆ. ನಾನು ಅವರಿಗೆ, 'ನಿಮ್ಮ ಪೀಳಿಗೆ ಗೂಗಲ್‌ಸರ್ಚ್ ಮತ್ತು ಕಾಪಿ ಪೇಸ್ಟಿನ ಪೀಳಿಗೆ. ಇದು ವ್ಯಕ್ತಿವಾದ ಮತ್ತು ಭೌತಿಕವಾದದ ಕಾಲ. ನಿಮಗೆ ಸ್ಪರ್ಧೆಯಲ್ಲಿ ವಿಶ್ವಾಸವಿದೆ, ಆದರೆ ಹಿಂದಿನ ಪೀಳಿಗೆ ಸಹಕಾರದಲ್ಲಿ ವಿಶ್ವಾಸವಿಡುತ್ತಿತ್ತು' ಎಂದು ಹೇಳುತ್ತೇನೆ.

ಮೊಬೈಲ್, ಕಂಪ್ಯೂಟರ್, ಇಂಟರ್‌ನೆಟ್, ಸ್ಕೈಪ್, ಫೇಸ್‌ಬುಕ್, ಐಫೋನ್, ಸ್ಮಾರ್ಟ್‌ಫೋನ್ ಹೀಗೆ ಅದೆಷ್ಟೋ ಆಧುನಿಕ ಉಪಕರಣಗಳು ಆವಿಷ್ಕಾರಗೊಳ್ಳುತ್ತಿರುವುದನ್ನು ನೋಡಿದ್ದೇನೆ. ತಾಂತ್ರಿಕ ಕ್ರಾಂತಿ ಸಾರಿಗೆ ವ್ಯವಸ್ಥೆಯನ್ನು ಅದೆಷ್ಟು ತೀವ್ರ ಮತ್ತು ಕುಶಲಗೊಳಿಸಿದೆ! ನನ್ನ ಕಾಲದಲ್ಲಿ ಅಂಚೆಕಾರ್ಡ್, ಪೆನ್ನು, ಲೇಖನಿ, ಕ್ರೆಡಲ್‌ಫೋನ್ ಚಾಲ್ತಿಯಲ್ಲಿದ್ದು, ಫೋನ್‌ನಲ್ಲಿ ಒಂದು ಚಿಕ್ಕ ಭೌಗೋಳಿಕ ಕ್ಷೇತ್ರದವರೆಗಷ್ಟೇ ಮಾತುಕತೆಯಾಡುವುದು ಸಾಧ್ಯವಿತ್ತು. ದೂರದ ನಗರಗಳಲ್ಲಿರುವ ಸಂಬಂಧಿಕರು ಮತ್ತು ಘನಿಷ್ಠ ಮಿತ್ರರನ್ನು ಸಂಪರ್ಕಿಸಲು ಪತ್ರಗಳನ್ನು ಆಶ್ರಯಿಸಬೇಕಿತ್ತು. ಒಂದು ಪತ್ರಕ್ಕೆ ಉತ್ತರಿಸಲು ಒಂದೊಂದು ತಿಂಗಳ ಅವಧಿ ಹಿಡಿಯುತ್ತಿತ್ತು. ನಾವು ಆಗ ಅಂಚೆಯವನನ್ನು ಕಾತರದಿಂದ ಕಾಯುತ್ತಿದ್ದೆವು. ನಾವು ಅಂಚೆವಾಹಕನ ಮೇಲೆ ಪ್ರಬಂಧಗಳನ್ನು ಸಹ ಬರೆಯುತ್ತಿದ್ದೆವು.

ಇವತ್ತು ಎಲ್ಲವೂ ತಕ್ಷಣ ಪ್ರತ್ಯಕ್ಷ. ನನ್ನ ಶಾಲೆಯ ವಿದ್ಯಾರ್ಥಿಗಳು ಬೋರ್ಡ್‌ನಿಂದ ನೋಟೀಸ್ ತೆಗೆದುಕೊಳ್ಳಬೇಕೆಂದಿದ್ದರೆ, ತಕ್ಷಣ ತಮ್ಮ ಮೊಬೈಲ್‌ನಿಂದ ಬೋರ್ಡ್‌ನ ಚಿತ್ರವೊಂದನ್ನು ತೆಗೆದುಕೊಳ್ಳುತ್ತಾರೆ. ನಾನು ಬೋಧಿಸುವಾಗ ತರಗತಿಯೊಳಗೆ ಸುತ್ತುಹಾಕುವಾಗ, ನೋಡಿ ತುಂಬಾ ದುಃಖವಾಗುತ್ತದೆ; ಏಕೆಂದರೆ ಒಬ್ಬ ವಿದ್ಯಾರ್ಥಿ ಸಹ ತನ್ನ ನೋಟ್‌ಬುಕ್‌ನಲ್ಲಿ ಒಂದು ಶಬ್ದವನ್ನೂ ಬರೆದುಕೊಳ್ಳುವುದಿಲ್ಲ. ಅವರ ಕೈಯಲ್ಲಿ ನೋಟ್‌ಬುಕ್ ಅಥವಾ ಪೆನ್ ಇರುವುದಿಲ್ಲ. ನೀವೇಕೆ ನೋಟ್ಸ್ ತೆಗೆದುಕೊಳ್ಳುತ್ತಿಲ್ಲ ಎಂದು ಪ್ರಶ್ನಿಸಿದಾಗ ಅವರು ತಮ್ಮ ಕೈಯಲ್ಲಿ ಹಿಡಿದ ಚಿಕ್ಕ ಎಲೆಕ್ಟ್ರಾನಿಕ್ ಉಪಕರಣವನ್ನು ತೋರಿಸುತ್ತಾ, 'ಇದರಲ್ಲಿದೆ' ಎನ್ನುತ್ತಾರೆ. ಅವರು ಕೂಡಲೇ ತಮ್ಮ ಬೆರಳುಗಳ ಸ್ಪರ್ಶದಿಂದ ಸ್ಕ್ರೀನನ್ನು ಸ್ವಲ್ಪ ಅಗಲಿಸುತ್ತಾ, ಅದನ್ನು ದೊಡ್ಡದು ಮಾಡಿ, 'ನೋಟ್ಸ್ ಇದರಲ್ಲಿ ಬಂಧಿಯಾಗಿದೆ' ಎಂದು ನನಗೆ ತೋರಿಸುತ್ತಾರೆ. ಆದರೆ ನನ್ನ ದುರ್ಬಲ ಕಣ್ಣುಗಳಿಂದ ಅದನ್ನು ಓದಲಾರೆ, ಅದರಲ್ಲಿ ತೀರ ಸಣ್ಣ ಅಕ್ಷರ...

ಈ ಹೊಸ ಪೀಳಿಗೆ ಯಾವ ದಿಕ್ಕಿಗೆ ಹೋಗುತ್ತಿದೆ ಎಂದು ಯೋಚಿಸಿ ನನಗೆ ಆಶ್ಚರ್ಯವಾಗುತ್ತದೆ. ಜಗತ್ತು ಮತ್ತು ಜೀವನ ಬದಲಾಗುತ್ತಿದೆ ಎಂಬ ಪ್ರಶ್ನೆ ಅಲ್ಲ, ಇದು ಯಾವ ಸ್ವರೂಪವನ್ನು ಧರಿಸುತ್ತಿದೆ ಎಂಬುದೇ ಪ್ರಶ್ನೆಯಾಗಿದೆ.

ನನ್ನ ಮಕ್ಕಳಾದ ಲೂಸಿ ಮತ್ತು ಗ್ರೇಸಿ ನೋಡು ನೋಡುತ್ತಲೇ ಇಪ್ಪತ್ತನಾಲ್ಕನೆಯ ವಯಸ್ಸಿಗೆ ಕಾಲಿಟ್ಟಿದ್ದಾರೆ. ಇದುವರೆಗೆ ಅವರು ನನ್ನನ್ನು ಬಹುಶಃ ನನ್ನ ಅಳಿಯನಾಗುವಂಥ ಯಾವ ಯುವಕನೊಂದಿಗೂ ಭೇಟಿ ಮಾಡಿಸಿಲ್ಲ. ಮದುವೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದಾಗ ಅವರು ಹೇಳುತ್ತಾರೆ 'ಪಾಪಾ, ಇನ್ನೂ ಅಂಥವನು ಸಿಕ್ಕೇ ಇಲ್ಲ'.

'ಯಾವಾಗ ಸಿಗ್ತಾನೆ?'

'ಸಿಗ್ತಾನೆ... ಅವಸರ ಏಕೆ?'

ಅವರಿಗೆ ಅವಸರವಿಲ್ಲ, ನನಗಿದೆ. ಜೀವನ ಹುಟ್ಟಿದ ದಿನದಿಂದ ನಿರ್ವಿಘ್ನವಾಗಿ ಮುಂದುವರೆಯುತ್ತಾ ಸಾವಿನ ಬಾಗಿಲಿನ ಸಮೀಪಕ್ಕೆ ಬರುತ್ತಿರುವಾಗ, ಮನುಷ್ಯ ಎಲ್ಲವೂ ತನ್ನ ಜೀವನದಲ್ಲಿ ಶೀಘ್ರ ಘಟಿಸಲಿ ಎಂದು ಬಯಸುತ್ತಾನೆ. ನನ್ನ ಪುತ್ರಿಯರ ವಿವಾಹ ನಿಶ್ಚಿತವಾಗಲಿ, ನಾನು ನನ್ನ ಪಾರಂಪರಿಕ ಉಡುಪಾದ ಕಿಲ್ಟ್ ಧರಿಸಿ ನನ್ನ ಮಕ್ಕಳ ಕೈ ಹಿಡಿದು, ಒಬ್ಬ ಯೋಗ್ಯ ಹುಡುಗನ ಕೈಗೆ ಒಪ್ಪಿಸಿ ತಂದೆಯ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಬಯಸುತ್ತಿದ್ದೇನೆ. ಆ ದಿನ ಎಂದು ಬರುವುದೋ ಗೊತ್ತಿಲ್ಲ.. ನಾನು ಸೋಫಾದಲ್ಲಿ ಚಕ್ಕಳ ಬಕ್ಕಳ ಹಾಕಿ ಒಂಟಿಯಾಗಿ ಕೂತಿರುವುದನ್ನು ನೋಡಿದ ಆ ಯುವಕರ ಗಮನ ನನ್ನೆಡೆಗೆ ಆಕರ್ಷಿತವಾಯಿತು. ನಾನು ಮಿತ್ರತ್ವದ ಭಾವನೆಯಿಂದ ಅವರೆಡೆಗೆ ಕೈಯಾಡಿಸಿದೆ. ಅವರು ಸಹ ಕೈಯಾಡಿಸಿದರು. ಅವರಲ್ಲಿ ಒಂದು ಉತ್ಸಾಹವಿದೆ, ಸ್ಫೂರ್ತಿಯಿದೆ. ನನ್ನ ಮತ್ತು ಅವರ ನಡುವೆ ಮಾತುಕತೆ ನಡೆಯಿತು. ಅವರಿಗೆ ನನ್ನ ಪ್ರಯಾಣದ ಬಗ್ಗೆ ಹೇಳಿದಾಗ ಅವರು ಉತ್ಸಾಹಿತರಾಗಿ ಹೇಳಿದರು.

'ತೀರ್ಥಯಾತ್ರೆ ಒಂದು ಹಳೆಯ ಸಾಹಸದ ಯಾತ್ರೆಯಾಗಿದೆ, ಆದರೆ ನೀವು ಅದಕ್ಕೆ ಒಂದು ಆಧುನಿಕತೆಯ ಸ್ಪರ್ಶವನ್ನು ನೀಡಿದಿರಿ. ನೀವು ಓರ್ವ ಶ್ರದ್ಧಾವಂತರು ಮಾತ್ರವಲ್ಲ, ಓರ್ವ ಪ್ರೇಮಿಯಾಗಿದ್ದೀರ'. ಅವರು ನನ್ನ ಫೋಟೊ ಹೊಡೆದುಕೊಳ್ಳಲಾರಂಭಿಸಿದರು. ನೀವು ಪ್ರೇಮಿಗಳಿಗೆ ಪ್ರೇಮದ ಉದಾಹರಣೆ ಆಗುತ್ತಿದ್ದೀರ ಎಂದರು. ಅವರು ನನ್ನನ್ನು ವಿಶ್ವದ ಮಹಾನ್ ಐತಿಹಾಸಿಕ ಪ್ರೇಮಿಗಳಾದ ರೋಮಿಯೊ ಜೂಲಿಯಟ್, ನೆಪೋಲಿಯನ್ ಜೋಶಫೀನ್, ಸಲೀಮ್ ಅನಾರ್ಕಲಿ ಮತ್ತು ಲೈಲಾಮಜನೂ ಇವರಲ್ಲಿ ಒಬ್ಬನೆಂದು ಹೇಳಿದರು.

(ಸಶೇಷ)